# ಸುರಕ್ಷಿತ ವಾಹನ ಚಾಲನೆ

ಪ್ರಾಥಮಿಕ ವಾಹನ ಚಾಲನೆಯ ಕೈಪಿಡಿ ಮತ್ತು ರಸ್ತೆಯ ನಿಯಮಗಳು

# ಮುನ್ನುಡಿ

ಭಾರತದ ತ್ವರಿತಗತಿಯ ಅಭಿವೃದ್ಧಿಯ ಜೊತೆಯಲ್ಲಿಯೇ ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ರಸ್ತೆಯಲ್ಲಿ ವಾಹನಗಳ ಹೆಚ್ಚಳ, ಜೊತೆಯಲ್ಲಿಯೇ ವಾಹನ ಚಲಿಸುತ್ತಿರುವಾಗಲೇ ಮೊಬೈಲ್ ಫೋನ್‌ನಿಂದ ಮಾತುಕತೆ, ಅಲ್ಲೇ ಕುಡಿತ ಮತ್ತು ಧೂಮಪಾನ ಇವೆಲ್ಲ ಆಸ್ತಿಪಾಸ್ತಿ ಹಾಗೂ ಜೀವಕ್ಕೆ ಹಾನಿಕರ ಎನ್ನುವುದನ್ನು ತೋರಿಸಿಕೊಟ್ಟಿವೆ.

ಅಡ್ಡಾದಿಡ್ಡಿ ವಾಹನ ಚಾಲನೆಯಿಂದ ಉಂಟಾಗುವ ಅಪಘಾತಗಳಲ್ಲಿ ಸಾವಿನ ಮತ್ತು ಗಾಯದ ಪ್ರಸಂಗಗಳ ಸುದ್ದಿಗಳಿಗಂತೂ ಮಿತಿಯೇ ಇಲ್ಲದಂತಾಗಿದೆ. ನಾವು ಜಾಗೂರಕರಾಗಿರಬೇಕು ಹಾಗೂ ಅಪಘಾತದ ಅಂಕಿಸಂಖ್ಯೆಗಳಲ್ಲಿ ಒಂದು ಭಾಗವಾಗುವ ಪರಿಸ್ಥಿತಿ ನಮಗುಂಟಾಗದಂತೆ ನೋಡಿಕೊಳ್ಳಬೇಕು.

ಇತರ ರಸ್ತೆ ಬಳಕೆದಾರರನ್ನು ಲಕ್ಷಕ್ಕೆ ತೆಗೆದುಕೊಳ್ಳುವ, ರಸ್ತೆ ನಿಯಮಗಳನ್ನು ಗೌರವಿಸುವ ಮತ್ತು ರಸ್ತೆಯನ್ನು ಜವಾಬ್ದಾರಿಯಿಂದ ಉಪಯೋಗಿಸುವ ಸುಶಿಕ್ಷಿತ ಮತ್ತು ತಿಳುವಳಿಕೆ ಹೊಂದಿರುವ ಡ್ರೈವರ್‌ಗಳ ಸಂಸ್ಕೃತಿಯನ್ನು ನಿರ್ಮಿಸಿದಲ್ಲಿ ಮಾತ್ರ ಪ್ರತಿದಿನವೂ ಆಗುತ್ತಿರುವ ಈ ತರಹದ ಹಾನಿ ಮತ್ತು ಅನವಶ್ಯಕ ಸಾವುಗಳನ್ನು ಕಡಿಮೆ ಮಾಡಬಹುದು. ನಾವು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಮತ್ತು ಒಟ್ಟಾಗಿ ಈ ಹೊಣೆಗಾರಿಕೆಯನ್ನು ಹೊತ್ತಲ್ಲಿ ನಮ್ಮ ರಸ್ತೆಗಳ ಸ್ಥಿತಿಯನ್ನು ಅಂತೆಯೇ ರಸ್ತೆ ಬಳಕೆದಾರರ ಸ್ವಭಾವವನ್ನು ಸುಧಾರಿಸಬಹುದು.


Language: Kannada

ಪ್ರಕಾಶಕರು: **ಹ್ಯೂಬರ್ಟ್ ಎಬ್ನರ್(ಇಂಡಿಯಾ) ಪ್ರೈ.ಲಿ.**
**ಸಿ 18, ಚಿರಾಗ್ ಎನ್‌ಕ್ಲೇವ್**
**ನವದೆಹಲಿ 110048**
**ಫೋನ್**: +91 11 4610 7654
**ಇ–ಮೇಲ್**:driving@he-india.com
**ವೆಬ್**: www.he-india.com


© ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.



ಮೊದಲ ಮುದ್ರಣ: ಸೆಪ್ಟೆಂಬರ್ 2009



ಈ ಮುದ್ರಣದ ಯಾವುದೇ ಭಾಗವನ್ನು ಮುದ್ರಕರ ಪೂರ್ವಾನುಮತಿಯಿಲ್ಲದೇ ಯಾವುದೇ ರೂಪದಲ್ಲಿ ಅಥವಾ ಎಲೆಕ್ಟ್ರಾನಿಕ್, ಮೆಕ್ಯಾನಿಕಲ್, ಝೆರಾಕ್ಸ್, ರೆಕಾರ್ಡಿಂಗ್‌ಗಳಂತಹ ಯಾವುದೇ ಸಾಧನದ ಮೂಲಕ–ಮರುಮುದ್ರಣ ಮಾಡುವುದಾಗಲೀ, ಸಂಗ್ರಹಿಸಿಡುವುದಾಗಲೀ, ಹಸ್ತಾಂತರಿಸುವುದಾಗಲೀ ಮಾಡುವಂತಿಲ್ಲ. ಸಾರ್ವಜನಿಕ ಎರವಲು ಕೊಡುವುದನ್ನು ನಿಷೇಧಿಸಿದೆ.

# ಪರಿವಿಡಿ




**ಪರಿಚಯ** 1

ಭಾರತೀಯ ರಸ್ತೆಗಳ ಚಿತ್ರಣ 1

ರಸ್ತೆ ಬಳಕೆದಾರರು ಮತ್ತು ಕಾನೂನು 1





**ಸಂಚಾರ ನಿಯಂತ್ರಣ ವಿಧಾನಗಳು** 3

ಸಾಮಾನ್ಯ 3

ಟ್ರಾಫಿಕ್ ಪೋಲಿಸ್ ಅಥವಾ ವಾರ್ಡನ್ 3

ಟ್ರಾಫಿಕ್ ಲೈಟ್‌ಗಳು 5

ಟ್ರಾಫಿಕ್ ಮತ್ತು ರಸ್ತೆ ಸಂಕೇತಗಳು 7

ಕಡ್ಡಾಯ ರಸ್ತೆ ಸಂಕೇತಗಳು 7

ಎಚ್ಚರಿಕೆಯ ರಸ್ತೆ ಸಂಕೇತಗಳು 10

ಮಾಹಿತಿಯ ರಸ್ತೆ ಸಂಕೇತಗಳು 15

ಟ್ರಾಫಿಕ್ ಅಥವಾ ರಸ್ತೆಯ ಗುರುತುಗಳು 17

ಸ್ಥಳಾಂತರಿಬಹುದಾದ ರಸ್ತೆ ಉಪಕರಣ 19





**ರಸ್ತೆ ನಿಯಮಗಳು ಮತ್ತು ರಕ್ಷಣಾತ್ಮಕ ವಾಹನ ಚಾಲನೆ** 21

ಲೇನ್ ನಿರ್ವಹಣೆ 21

ವೇಗ 23

ನಿಲ್ಲಿಸುವ ಅಂತರ 25

ಮುಂದೆ ಚಲಿಸುವ ವಾಹನದಿಂದ ಇರಬೇಕಾದ ಅಂತರ 26

ಓವರ್‌ಟೇಕ್ ಮಾಡುವುದು 28

ಎಡಕ್ಕೂ ಬಲಕ್ಕೂ ತಿರುಗುವುದು 30

ಹಿಂದಿನ ದಿಸೆಯಲ್ಲಿ ಚಲಿಸುವುದು 31

U-ಟರ್ನ್ 32

ರಸ್ತೆಯ ಹಕ್ಕು ಮತ್ತು ರಸ್ತೆ ಜಂಕ್ಷನ್‌ಗಳಲ್ಲಿ ಎಚ್ಚರಿಕೆ 33

ಲೈಟ್ ಸಿಗ್ನಲ್‌ರಹಿತ ಕೂಡುರಸ್ತೆಗೆ ಬರುವುದು 34

ಲೈಟ್ ಸಿಗ್ನಲ್‌ಗಳಿರುವ ಕೂಡುರಸ್ತೆಗೆ ಬರುವುದು 35

ಸರ್ಕಲ್ 35

ಪಾರ್ಕಿಂಗ್ 36





**ಬೇರೆ ಬೇರೆ ರೀತಿಯ ರಸ್ತೆ ಬಳಕೆದಾರರು** 39

ನಡೆದು ಹೋಗುವವರು 39

ಸೈಕಲ್ ಸವಾರರು 40

ತುರ್ತುವಾಹನಗಳು 41

ನಿಧಾನ ಚಲಿಸುವ ವಾಹನಗಳು 41

ದೊಡ್ಡ ಮತ್ತು ಭಾರೀ ವಾಹನಗಳು 41

ಶಾಲಾ ಬಸ್ಸುಗಳು 41

ಆಟೋರಿಕ್ಷಾಗಳು 42

ದ್ವಿಚಕ್ರವಾಹನಗಳು 42

ಜಾನುವಾರುಗಳು 43

ತರಬೇತಿ ವಾಹನಗಳು 43



300541

ಭಾರತವು ದೊಡ್ಡದಾದ ಮತ್ತು ಸಂಕೀರ್ಣವಾದ ರಸ್ತೆಜಾಲವನ್ನು ಹೊಂದಿರುತ್ತದೆ. ಈ ರಸ್ತೆಜಾಲವು ಮೂಲೆಮೂಲೆಯ ಪ್ರದೇಶಗಳಿಗೂ ಸಂಪರ್ಕವನ್ನು ಹೊಂದಿದೆ.

ಇಂದು ಭಾರತವು 6 ಕೋಟಿ ವಾಹನಗಳನ್ನು ಹೊಂದಿದೆ. ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾದಂತೆ ಅಪಘಾತಗಳು ಮತ್ತು ಪ್ರಾಣಹಾನಿಗಳ ಸಂಖ್ಯೆಯಲ್ಲಿಯೂ ಹೆಚ್ಚಳವಾಗುತ್ತಿದೆ.

ನಮ್ಮಲ್ಲಿ ಸರಿಯಾಗಿ ತರಬೇತಾದ ಚಾಲಕರ ಅಗತ್ಯವಿದೆ. ಸುರಕ್ಷಿತ ಚಾಲನೆಯು ಒಳ್ಳೆಯ ತರಬೇತಿಯಿಂದ ಬರುತ್ತದೆ. ಕೇವಲ ಡ್ರೈವ್ ಮಾಡುವುದು ಹೇಗೆಂದು ತಿಳಿದು, ಲೈಸನ್ಸ್ ಪಡೆದುಕೊಂಡು ವಾಹನದ ಸರ್ಟಿಫಿಕೇಟ್ ಇರಿಸಿಕೊಂಡುಬಿಟ್ಟರೆ ಸಾಕಾಗುವುದಿಲ್ಲ. ನೀವು ರಸ್ತೆ ಸುರಕ್ಷತಾ ನಿಯಮಗಳನ್ನು ಗಮನಿಸಬೇಕು ಮತ್ತು ಗೌರವಿಸಬೇಕು. ಇವು ನಿಮ್ಮ ರಕ್ಷಣೆ ಮಾಡುವುದೇ ಅಲ್ಲದೇ ರಸ್ತೆಯ ಮೇಲೆ ಅನೇಕ ಜೀವಗಳನ್ನೂ ಉಳಿಸುತ್ತವೆ.

## » ಭಾರತದ ರಸ್ತೆ ಪರಿಸ್ಥಿತಿ



300544

ಸರ್ವೇಗಳು ಮತ್ತು ಅಂಕಿಅಂಶಗಳ ಪ್ರಕಾರ ಕಳೆದ 50 ವರ್ಷಗಳಲ್ಲಿ ಭಾರತದಲ್ಲಿ ವಾಹನಗಳ ಸಂಖ್ಯೆ 170 ಪಟ್ಟು ಹೆಚ್ಚಾಗಿದೆ. ಆದರೆ ರಸ್ತೆಗಳು 9 ಪಟ್ಟು ಮಾತ್ರವೇ ಹೆಚ್ಚಾಗಿವೆ.

ದೇಶದಲ್ಲಿರುವ ವಾಹನಗಳ ಸಂಖ್ಯೆ ಐದೂವರೆ ಕೋಟಿಗಿಂತಲೂ ಹೆಚ್ಚಿದೆ ಮತ್ತು ಪ್ರತೀ ವರ್ಷ 25 ಲಕ್ಷ ಹೆಚ್ಚಿದೆ.

ಭಾರತದಲ್ಲಿ ದಿನವೂ ಪ್ರಯಾಣ ಮಾಡುವವರಿಗೆ ರಸ್ತೆಗಳು ಮತ್ತು ಹೈವೇಗಳೆಂದರೆ ಕೆಟ್ಟ ಸ್ವಪ್ನದಂತೆ ಆಗಿದೆ. ರಸ್ತೆಗಳಲ್ಲಿ ಹೋಗುವವರಿಗೆ ಆಗುವ ಅಪಘಾತಗಳು ಮತ್ತು ಸಾವುನೋವು ತಪ್ಪಿಸಲು, ಟ್ರಾಫಿಕ್ ನಿಯಮಗಳು ಹಾಗೂ ವಿಧಿಗಳನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಒಬ್ಬ ಚಾಲಕ ಸುರಕ್ಷಿತ ಚಾಲಕ ಎನಿಸಿಕೊಳ್ಳಬೇಕೆಂದರೆ ರಸ್ತೆಗಳಲ್ಲಿ ಹೋಗುವ ಎಲ್ಲರ ಬಗ್ಗೆಯೂ ಯೋಚನೆ ಮತ್ತು ಸಹನೆ ಹೊಂದಿರುವುದು ಮೊದಲ ಅವಶ್ಯಕತೆ.

ಹೈವೇ ಕೋಡ್ ಎಂದರೆ ಸರಳ ನಿಯಮಗಳ ಒಂದು ಸಮುಚ್ಚಯ, ಆದರೆ ಅವುಗಳ ಬಳಕೆ ರಸ್ತೆಯನ್ನು ಸುರಕ್ಷಿತವಾಗಿಡಲು ಮತ್ತು ಜೀವಗಳನ್ನು ಉಳಿಸಲು ಸಹಾಯಕವಾಗುತ್ತದೆ.

ರಸ್ತೆಯನ್ನು ಉಪಯೋಗಿಸುವಾಗ ಗಮನಿಸಬೇಕಾದ ಮಹತ್ವದ ಸಂಗತಿಗಳು:

- ಚಾಲಕನೊಬ್ಬನ ಕರ್ತವ್ಯಗಳು
- ಟ್ರಾಫಿಕ್ ಚಿಹ್ನೆಗಳು ಮತ್ತು ನಿಯಮಗಳನ್ನು ಅರ್ಥಮಾಡಿಕೊಳ್ಳಲು ಪೂರ್ಣವಾದ ತಿಳುವಳಿಕೆ ಮತ್ತು ಶಕ್ತಿ ಸಾಮರ್ಥ್ಯ ಹೊಂದಿರಬೇಕು.
- ವಾಹನದ ಬಗ್ಗೆ ಸಾಕಷ್ಟು ತಿಳುವಳಿಕೆ ಮತ್ತು ಅದನ್ನು ಯಾವಾಗಲೂ ದುರಸ್ತಿಯಲ್ಲಿಡುವುದು
- ವಾಹನವನ್ನು ನಿರಂತರ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು
- ರಸ್ತೆ ಮೇಲೆ ವಾಹನ ಚಲಾಯಿಸುವಾಗ ಶಿಸ್ತು – ಇತರ ರಸ್ತೆ ಬಳಕೆದಾರರ ವರ್ತನೆ
- ಕಷ್ಟದ ಹಾಗೂ ಅಪಾಯಕಾರಿ ಸಂದರ್ಭಗಳಲ್ಲಿ ತಕ್ಷಣ ಪ್ರತಿಕ್ರಿಯೆ ನೀಡುವ ಮತ್ತು ಬೇಗನೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ
- ಪ್ರಥಮ ಚಿಕಿತ್ಸೆಯ ಬಗ್ಗೆ ಅವಶ್ಯಕ ತಿಳುವಳಿಕೆ

## » ರಸ್ತೆ ಬಳಕೆದಾರ ಮತ್ತು ಕಾನೂನು

ಮೋಟಾರ್ ವಾಹನ ಚಲಾಯಿಸುವುದು ಒಂದು ದೊಡ್ಡ ಜವಾಬ್ದಾರಿಯುತ ಕೆಲಸ. ರಸ್ತೆ ಸಂಚಾರ ನಿಯಮಗಳು, ವಿಧಿಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ರಸ್ತೆಯಲ್ಲಿ ಹೋಗುವ ಬೇರೆ ಜನರ ಬಗ್ಗೆ ಯೋಚನೆ ಮಾಡುವುದರಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಬಹುದು. ಬೇರೆ ಜನರನ್ನೂ ರಕ್ಷಿಸಬಹುದು. ನಮ್ಮ ರಸ್ತೆ ಸುರಕ್ಷತೆ ಕಾಪಾಡಬಹುದು.

ಸಂಚಾರ ನಿಯಮಗಳ ತಿಳುವಳಿಕೆ ಮತ್ತು ಪಾಲನೆಯು ಅಪಘಾತಗಳನ್ನು ಕಡಿಮೆ ಮಾಡುತ್ತದೆ ಮತ್ತು ಜೀವಗಳನ್ನು ರಕ್ಷಿಸುತ್ತದೆ.

ರಸ್ತೆ ಬಳಸುವವರಲ್ಲಿ ನಡೆದುಹೋಗುವವರು ಮಕ್ಕಳು ಮುದುಕರು ಅಂಗವಿಕಲರು ಮತ್ತು ಕುರುಡರು ಸೈಕಲ್ ಸವಾರರು ಸೈಕಲ್ ರಿಕ್ಷಾದವರು ಮತ್ತು ಕುದುರೆ ಗಾಡಿಯವರೂ ಇರುತ್ತಾರೆ.

ಸಂಚಾರ ನಿಯಮಗಳು ಕಾನೂನಿನ ಪ್ರಕಾರ ಅಗತ್ಯವೆನಿಸಿವೆ. ಅವುಗಳನ್ನು ಪಾಲಿಸದೇ ಇರುವುದು ಮತ್ತು ಗಮನಿಸದೇ ಇರುವುದು ಅಪರಾಧವಾಗಿರುತ್ತದೆ. ಅಲ್ಲದೇ ದಂಡ, ಡ್ರೈವಿಂಗ್ ಲೈಸೆನ್ಸ್ ರದ್ದು ಮಾಡುವುದು ಸೇರಿದಂತೆ ಕೆಲವು ಪ್ರಕರಣಗಳಲ್ಲಿ ಜೈಲುವಾಸದ ಶಿಕ್ಷೆಯನ್ನೂ ವಿಧಿಸಬಹುದು.

ತರಬೇತಾಗಿರದ ಡ್ರೈವರ್ ಅಥವಾ ಕಾಳಜಿಯಿಲ್ಲದ ಡ್ರೈವಿಂಗ್ ಕಷ್ಟಕರ ಸನ್ನಿವೇಶಗಳಿಗೆ ಮತ್ತು ಜೀವ ಹಾಗೂ ಆಸ್ತಿಪಾಸ್ತಿ ನಷ್ಟಕ್ಕೆ ಕಾರಣವಾಗಬಹುದು.

ರಸ್ತೆ ಅಪಘಾತಗಳಿಂದ ಭಾರತದಲ್ಲಿ ಪ್ರತೀ ವರ್ಷ ಒಂದು ಲಕ್ಷ ಜನ ಸಾವಿಗೆ ತುತ್ತಾಗುತ್ತಾರೆ.

ಹತ್ತು ಲಕ್ಷಕ್ಕೂ ಅಧಿಕ ಜನ ಗಾಯಕ್ಕೆ ಅಥವಾ ತೀವ್ರ ನೋವಿಗೆ ತುತ್ತಾಗುತ್ತಾರೆ. ಇವರಲ್ಲಿ ಹೆಚ್ಚಿನ ಜನ ನಡೆದುಹೋಗುವವರು, ಸೈಕಲ್ ಮತ್ತು ಮೋಟರ್ ಸೈಕಲ್ ಸವಾರರಾಗಿರುತ್ತಾರೆ.




ಭಾರತದಲ್ಲಿ ವಾಹನ ಚಾಲನೆ ಮಾಡಲು ಕಾಳಜಿ, ಕೌಶಲ್ಯ ಮತ್ತು ಹೆಚ್ಚಿನ ಎಚ್ಚರವಿರಬೇಕು.

ರಸ್ತೆ ಸುರಕ್ಷತೆಯ ಬಗ್ಗೆ ಶಿಕ್ಷಣದ ಕೊರತೆಯು ಪ್ರಾಣಹಾನಿಗಳಿಗೆ ಮತ್ತು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.

ಅನೇಕ ರಸ್ತೆ ಅಪಘಾತಗಳಲ್ಲಿ ಮಾನವನಿಗೆ ಪ್ರಾಣಹಾನಿ ಮತ್ತು ಆರ್ಥಿಕ ಹಾನಿಯಾಗುತ್ತವೆ. ಗಳಿಸುವವರು ಮರಣ ಹೊಂದಿದರೆ, ಆತನ ಕುಟುಂಬವು ತುಂಬ ಕಷ್ಟಗಳಿಗೆ ಒಳಗಾಗುತ್ತದೆ. ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆ ಕುಂಠಿತವಾಗುತ್ತದೆ ಹಾಗೂ ಇದು ಬಡತನಕ್ಕೂ ಕಾರಣವಾಗುತ್ತದೆ.

ರಸ್ತೆ ಅಪಘಾತಗಳಿಂದಾಗಿ ಪ್ರಪಂಚದಲ್ಲಿ ಪ್ರಾಣಹಾನಿ ಮತ್ತು ಶಾರೀರಿಕ ನ್ಯೂನತೆಗಳು ಹೆಚ್ಚುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆಯ ಲೆಕ್ಕಾಚಾರದಂತೆ ರಸ್ತೆ ಅಪಘಾತಗಳಲ್ಲಿನ ಸಾವು, 2020ರವರೆಗೆ ಅಸ್ವಾಭಾವಿಕ ಸಾವಿನ ಮೂರನೇ ದೊಡ್ಡ ಕಾರಣವಾಗಲಿದೆ

ಈಗಿನ ರಸ್ತೆಯು ತುಂಬಾ ದುಸ್ಥಿತಿಯಲ್ಲಿದೆ. ನಾವು ರಸ್ತೆಯ ಹಿತವನ್ನು ಸುಧಾರಿಸಲು ಕೆಳಗಿನವುಗಳ ಸುಧಾರಣೆ ಮಾಡುವುದು ಅವಶ್ಯಕ.

- ಚಾಲನಾ ಕೌಶಲ್ಯ ಮತ್ತು ತರಬೇತಿ
- ರಸ್ತೆಯ ಮತ್ತು ಟ್ರಾಫಿಕ್‌ನ ಮೂಲಭೂತ ಸೌಕರ್ಯ
- ರಸ್ತೆ ಸೌಕರ್ಯ ಮತ್ತು ಅಧಿಕಾರಿಗಳ ವರ್ತನೆ ಬದಲಾಯಿಸಲು ತಕ್ಕ ಶಿಕ್ಷಣ ಪದ್ಧತಿ

ರಸ್ತೆ ಅಪಘಾತಗಳಲ್ಲಿ ವ್ಯವಸ್ಥಿತವಾದ ಇಳಿಕೆ ಮತ್ತು ಒಳ್ಳೆಯ ರಸ್ತೆ ವ್ಯವಸ್ಥೆಯು ಈ ಕೆಳಗಿನ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಿಂದ ಸಾಧ್ಯವಿದೆ:

- ಕ್ರಿಯಾಶೀಲ ರಸ್ತೆಯ ಮೂಲಭೂತ ಸೌಕರ್ಯ ಯೋಜನೆ
- ಸರಿಯಾದ ರಸ್ತೆ ಸುರಕ್ಷತಾ ನಿರ್ವಹಣೆ ತಂತ್ರಗಳು




- ರಸ್ತೆ ಬಳಕೆದಾರರ ತರಬೇತಿಗಾಗಿ ಸಾಕಷ್ಟು ಮೂಲಭೂತ ಸೌಕರ್ಯ
- ಎಲ್ಲ ರಸ್ತೆ ಬಳಕೆದಾರರಿಗೆ ರಸ್ತೆ ಸುರಕ್ಷತೆಯ ಬಗ್ಗೆ ಜ್ಞಾನ ಒದಗಿಸುವುದು
- ನಿರಂತರ ಜಾಗೃತಿಯ ಕಾರ್ಯಕ್ರಮಗಳು ಮತ್ತು ಸುಧಾರಿತ ಪರಿವರ್ತನಾ ತರಬೇತಿಗಳು
- ಸುರಕ್ಷತಾ ತಂತ್ರಗಳು ಮತ್ತು ರಕ್ಷಣಾತ್ಮಕ ಚಾಲನಾ ತರಬೇತಿ ಕಾರ್ಯಕ್ರಮಗಳು




ರಸ್ತೆ ಸುರಕ್ಷತೆ ಎಲ್ಲರ ಮತ್ತು ವೈಯಕ್ತಿಕ ಹೊಣೆಗಾರಿಕೆ ಯಾಗಿರುತ್ತದೆ.

ಸರಿಯಾದ ರಕ್ಷಣಾತ್ಮಕ ವಾಹನ ಚಾಲನೆಯ ತರಬೇತಿ, ಉನ್ನತ ಮಟ್ಟದ ಜಾಗರೂಕತೆ, ವಿಧೇಯತೆ ಮತ್ತು ಸಾಮಾನ್ಯ ತಿಳುವಳಿಕೆಯು ಜೊತೆಗೆ ಇತರ ರಸ್ತೆ ಬಳಕೆದಾರರನ್ನು ಗಣನೆಗೆ ತೆಗೆದುಕೊಳ್ಳುವ ಸ್ವಭಾವವೂ ಸೇರಿದರೆ ರಸ್ತೆ ಸುರಕ್ಷತೆಯು ಸಾಧ್ಯವಾಗುತ್ತದೆ.

# ಸಂಚಾರ ನಿಯಂತ್ರಣ ವಿಧಾನಗಳು


300175

ರಸ್ತೆಯಲ್ಲಿ ಶಿಸ್ತು ಇರುವಂತೆ ಮಾಡುವ ಹಾಗೂ ಅಪಘಾತ ತಡೆಯುವ ದೃಷ್ಟಿಯಿಂದ ಎಚ್ಚರಿಕೆ ಕೊಡಲು, ಮಾಹಿತಿ ನೀಡಲು ಮತ್ತು ಸಂಚಾರ ನಿಯಂತ್ರಣ ಮಾಡಲು ಸರ್ಕಾರ ಅಥವಾ ಸ್ಥಳೀಯ ಆಡಳಿತಗಳು ಉಪಯೋಗಿಸುವ ಸಾಧನಗಳೇ ಸಂಚಾರ ನಿಯಂತ್ರಣ ವಿಧಾನಗಳು.

ಈ ವಿಭಾಗದಲ್ಲಿ ಕೊಟ್ಟಿರುವ ನಿಯಮಗಳು ರಸ್ತೆಯಲ್ಲಿ ಹೋಗುವ ಎಲ್ಲರಿಗೂ ಅನ್ವಯಿಸುತ್ತವೆ. ಅವರು ನಡೆದುಹೋಗುವವರಾಗಿರಬಹುದು ಅಥವಾ ವಾಹನ ಚಾಲಕರಾಗಿರಬಹುದು. ಸಮಾನವಾಗಿ ಅನ್ವಯವಾಗುತ್ತವೆ.


## » ಸಾಮಾನ್ಯ

ಸಂಚಾರ ನಿಯಂತ್ರಣ ವಿಧಾನಗಳಲ್ಲಿ ಐದು ಬಗೆಗಳಿವೆ. ಅವುಗಳ ಅನುಕ್ರಮವಾಗಿ ಹೀಗಿವೆ:

- ಟ್ರಾಫಿಕ್ ನೋಡಿಕೊಳ್ಳುವವರು ಅಥವಾ ವಾರ್ಡನ್
- ಟ್ರಾಫಿಕ್ ಲೈಟ್‌ಗಳು ಅಥವಾ ರಸ್ತೆ ಸಿಗ್ನಲ್‌ಗಳು
- ಟ್ರಾಫಿಕ್ ಅಥವಾ ರಸ್ತೆ ಸಂಕೇತಗಳು
- ಟ್ರಾಫಿಕ್, ರಸ್ತೆ ಅಥವಾ ಬದಿಯಲ್ಲಿರುವ ಗುರುತುಗಳು
- ಸ್ಥಳಾಂತರಿಸಬಹುದಾದ ರಸ್ತೆ ಉಪಕರಣಗಳು ಮತ್ತು ಹಲವು ವಿಧಾನಗಳು

## » ಟ್ರಾಫಿಕ್ ಪೋಲೀಸ್ ಅಥವಾ ವಾರ್ಡನ್

ಹ್ಯಾಂಡ್ ಸಿಗ್ನಲ್ ಅಥವಾ ಕೈಸನ್ನೆ ಮಾಡಿ ಸಂಚಾರ ನಿಯಂತ್ರಿಸಲು ಅಧಿಕಾರ ಹೊಂದಿರುವ ಸಂಸ್ಥೆಯು ಟ್ರಾಫಿಕ್ ಪೋಲಿಸ್, ವಾರ್ಡನ್, ಎನ್‌ಸಿಸಿ ವಿದ್ಯಾರ್ಥಿ, ಗೃಹರಕ್ಷಕ ಅಥವಾ ಇನ್ನಾವುದೇ ವ್ಯಕ್ತಿಯನ್ನು ಟ್ರಾಫಿಕ್ ಬಗ್ಗೆ ಸೂಚನೆ ಕೊಡಲು ನೇಮಕ ಮಾಡಿರುತ್ತದೆ. ಅವರ ಸೂಚನೆಗಳು ಅಂತಿಮವಾಗಿರುತ್ತವೆ ಮತ್ತು ಮೇಲಿನ ಯಾವುದೇ ಸಂಚಾರ ನಿಯಂತ್ರಣ ವಿಧಾನಗಳಿಗಿಂತ ಹೆಚ್ಚು ಅಧಿಕಾರ ಹೊಂದಿರುತ್ತವೆ. ಉದಾಹರಣೆಗೆ ಹಸಿರು ದೀಪ ಉರಿಯುತ್ತಿದ್ದರೂ ಟ್ರಾಫಿಕ್ ವಾರ್ಡನ್ ನಿಲ್ಲಲು ಸಿಗ್ನಲ್ ತೋರಿಸಿದರೆ ನಿಂತುಕೊಳ್ಳಲೇಬೇಕು.

300191


### ಹ್ಯಾಂಡ್ ಸಿಗ್ನಲ್‌ಗಳು ಈ ಕೆಳಗಿನಂತೆ ಇರುತ್ತವೆ

- ಹಿಂದಿನಿಂದ ಬರುವ ವಾಹನ ನಿಲ್ಲಿಸುವ ಸಂಕೇತ


300554

- ಮುಂದಿನಿಂದ ಬರುವ ವಾಹನ ನಿಲ್ಲಿಸುವ ಸಂಕೇತ


300555

- ಎಚ್ಚರಿಕೆ – ಎಲ್ಲ ಸಂಚಾರವನ್ನೂ ನಿಲ್ಲಿಸತಕ್ಕದ್ದು


300556

- ಒಂದೇ ಸಲಕ್ಕೆ ಹಿಂದಿನಿಂದಲೂ ಹಾಗೂ ಮುಂದಿನಿಂದಲೂ ಬರುವ ವಾಹನಗಳನ್ನು ನಿಲ್ಲಿಸತಕ್ಕದು.


300557

- ಬಲಗಡೆ ಹಾಗೂ ಎಡಗಡೆಯಿಂದ ಬರು ವಾಹನಗಳಿಗೆ ನೇರವಾಗಿ ಹೋಗಲು ಅನುಮತಿ ನೀಡುವುದು.


300558

# ಸಂಚಾರ ನಿಯಂತ್ರಣ ವಿಧಾನಗಳು

- ಬಲಗಡೆ ಹಾಗೂ ಎಡಗಡೆಯಿಂದ ಬರುವ ವಾಹನಗಳನ್ನು ಬಲಕ್ಕೆ ತಿರುಗಿಸಲು ಅನುಮತಿ ನೀಡುವುದು.



300559

- ಎಡಗಡೆಯಿಂದ ಬರುವ ವಾಹನಗಳಿಗೆ ಮಾತ್ರ ನೇರವಾಗಿ ಹೋಗಲು ಅನುಮತಿ ನೀಡುವುದು.



300560

- ಎಡಗಡೆಯಿಂದ ಬರುವ ವಾಹನಗಳಿಗೆ ಮಾತ್ರ ಬಲಕ್ಕೆ ತಿರುಗಲು ಅನುಮತಿ ನೀಡುವುದು.



300561

- ಬಲಗಡೆಯಿಂದ ಬರುವ ವಾಹನಗಳಿಗೆ ಮಾತ್ರ ನೇರವಾಗಿ ಹೋಗಲು ಅನುಮತಿ ನೀಡುವುದು.



300562

- ಬಲಗಡೆಯಿಂದ ಬರುವ ವಾಹನಗಳಿಗೆ ಮಾತ್ರ ಬಲಕ್ಕೆ ತಿರುಗಲು ಅನುಮತಿ ನೀಡುವುದು.



300563

## ತಡೆರಹಿತ ಎಡತಿರುವು

ಸಾಮಾನ್ಯವಾಗಿ ಚಿಕ್ಕದಾದ ಮತ್ತು ಮಧ್ಯಮ ಜಂಕ್ಷನ್‌ಗಳಲ್ಲಿ ತಡೆರಹಿತ ಎಡತಿರುವು ಇರುವುದಿಲ್ಲ.

ಮೇನ್ ಜಂಕ್ಷನ್ ಅಥವಾ ಕೂಡುರಸ್ತೆಯಲ್ಲಿ ಎಡಕ್ಕೆ ತಿರುಗಲು ಪ್ರಯತ್ನಿಸುತ್ತಿರುವಾಗ ಟ್ರಾಫಿಕ್ ಸಿಗ್ನಲ್ ಇದೆಯೇ ಎಂದು ನೋಡಿ.



300754

ರಸ್ತೆಯ ಎಡಗಡೆಯಲ್ಲಿ ಟ್ರಾಫಿಕ್ ಲೈಟ್ ಇರುವ ಕೂಡುರಸ್ತೆಗಳಲ್ಲಿ ತಡೆರಹಿತ ಎಡತಿರುವು ಇರುವುದಿಲ್ಲ ಮತ್ತು ನೀವು ಎಡಕ್ಕೆ ತಿರುಗಬೇಕಾದರೆ ಸಿಗ್ನಲ್ ಬರುವವರೆಗೂ ಕಾಯಬೇಕು.

ಟ್ರಾಫಿಕ್ ಲೈಟ್‌ನ ಜೊತೆಗೆ ಸಂಚಾರ ನಿಯಂತ್ರಿಸುವ ಸೈನ್ ಬೋರ್ಡ್‌ಗಳು ತಡೆರಹಿತ ಎಡತಿರುವು ಇದೆಯಾ ಅಥವಾ ಇಲ್ಲವಾ ಎನ್ನುವುದನ್ನು ತೋರಿಸುತ್ತವೆ.

ತಡೆರಹಿತ ಎಡತಿರುವು ಇಲ್ಲದಿದ್ದರೆ, ಸಿಗ್ನಲ್ ಹಸಿರು ಲೈಟ್ ತೋರಿಸುವವರೆಗೂ ಕಾಯಬೇಕು.



300565

## » ಟ್ರಾಫಿಕ್ ಲೈಟ್‌ಗಳು

ಸಾಮಾನ್ಯವಾಗಿ ರಸ್ತೆ ಜಂಕ್ಷನ್‌ಗಳಲ್ಲಿ ವಾಹನಗಳ ಓಡಾಟವನ್ನು ವ್ಯವಸ್ಥಿತವಾಗಿ ನಿಯಂತ್ರಿಸುವ ಉದ್ದೇಶದಿಂದ ಟ್ರಾಫಿಕ್ ಲೈಟ್‌ಗಳನ್ನು ಅಳವಡಿಸಿರುತ್ತಾರೆ. ಎಲ್ಲ ವಾಹನಗಳೂ ಈ ಟ್ರಾಫಿಕ್ ಲೈಟ್‌ಗಳಿಗೆ ಅನುಸಾರವಾಗಿ ಚಲಿಸಬೇಕಾಗುತ್ತದೆ. ಪ್ರಯಾಣಿಸುತ್ತಿರುವಾಗ ನಿಮ್ಮ ಮುಂದೆ ಕಾಣಿಸುವ ಟ್ರಾಫಿಕ್ ಲೈಟ್‌ಗಳ ಸಿಗ್ನಲ್‌ಗಳನ್ನು ಪಾಲಿಸಬೇಕು.

ಲೈಟ್ ಸಿಗ್ನಲ್‌ಗಳನ್ನು ಜಂಕ್ಷನ್‌ನ ಮಧ್ಯದಲ್ಲಿ ಇಟ್ಟಿರುತ್ತಾರೆ. ಒಂದು ವೇಳೆ ಡಿವೈಡರ್ ಇರದಿದ್ದರೆ ಲೈಟ್ ಸಿಗ್ನಲ್‌ಗಳನ್ನು ರಸ್ತೆಯ ಎಡಭಾಗದಲ್ಲಿ ಇಟ್ಟಿರುತ್ತಾರೆ.


300203



ಹೆಚ್ಚಿನ ಸಂದರ್ಭಗಳಲ್ಲಿ ಎರಡು ಟ್ರಾಫಿಕ್ ಲೈಟ್‌ಗಳು ಇರುತ್ತವೆ. ಒಂದು ಟ್ರಾಫಿಕ್‌ಗೆ ಹತ್ತಿರದಲ್ಲಿರುತ್ತದೆ. ವಾಹನ ದಟ್ಟಣೆಯಿಂದಾಗಿ ಹತ್ತಿರದಲ್ಲಿರುವ ಲೈಟ್ ಕಾಣದಿದ್ದಲ್ಲಿ, ದೂರದಿಂದ ಕಾಣುವಂತೆ ರಸ್ತೆಯ ಮತ್ತೊಂದು ಪಕ್ಕದಲ್ಲಿ ಇನ್ನೊಂದು ಟ್ರಾಫಿಕ್ ಲೈಟ್ ಇರುತ್ತದೆ.

ಟ್ರಾಫಿಕ್ ಲೈಟ್‌ಗಳಲ್ಲಿ ಮೂರು ಬಣ್ಣದ ಲೈಟ್‌ಗಳಿರುತ್ತವೆ. ಇವು ಕೆಳಗಿನ ಆದೇಶಗಳನ್ನು ಸಂಕೇತಿಸುತ್ತವೆ.

300453




### ಕೆಂಪು ಲೈಟ್

300202



ಕೆಂಪು ಲೈಟ್ ಬಂದಿದೆ ಎಂದರೆ ನೀವು ವಾಹನವನ್ನು ನಿಲ್ಲಿಸಬೇಕು ಎಂಬ ಆದೇಶವಿದೆ.
ಆದರೆ ನೀವು ಎಡಕ್ಕೆ ತಿರುಗಬೇಕಾಗಿದ್ದರೆ, ಫ್ರೀ ಲೆಫ್ಟ್ ಟರ್ನ್ ಇದೆಯೇ ಎಂದು ತಿಳಿದುಕೊಳ್ಳಿ.

### ಹಳದಿ ಲೈಟ್

300204



ಹಳದಿ ಲೈಟ್ ಎಚ್ಚರಿಕೆಯಿಂದ ಇರಬೇಕು ಎಂಬುದನ್ನು ಸೂಚಿಸುತ್ತದೆ. ಇದನ್ನು ಕೆಂಪು ಲೈಟ್‌ನ ನಂತರ ತೋರಿಸಿದಲ್ಲಿ, ಇದು ಚಾಲಕನಿಗೆ ಹೋಗಲು ತಯಾರಾಗುವಂತೆ ಸೂಚನೆ. ಹಸಿರು ಲೈಟ್‌ನ ನಂತರ ತೋರಿಸಿದಲ್ಲಿ ನಿಧಾನಗೊಳಿಸಿ ಹಾಗೂ ವಾಹನ ನಿಲ್ಲಿಸಲು ತಯಾರಾಗಿ ಎಂಬ ಸೂಚನೆ ನೀಡುತ್ತದೆ.

### ಹಸಿರು ಲೈಟ್

300206



ಹಸಿರು ಲೈಟ್ ಬಂದರೆ, ಸುರಕ್ಷಿತವಾಗಿದ್ದಲ್ಲಿ ನಿಮಗೆ ಮುಂದೆ ಹೋಗಲು ಅವಕಾಶ ಇದೆ.

ಆದರೂ ಚಾಲಕ ಯಾವಾಗಲೂ ಎಚ್ಚರಿಕೆಯಿಂದ ಇರಬೇಕು ಹಾಗೂ ಅಂಥ ಪರಿಸ್ಥಿತಿ ಬಂದರೆ, ನಿಲ್ಲಿಸಲು ತಯಾರಾಗಿರಬೇಕು.

### ಕೆಂಪು ಬಾಣದ ಲೈಟ್

300493



ಕೆಂಪು ಬಾಣದ ಲೈಟ್ ಬಂದರೆ ಬಾಣವು ತೋರಿಸುವ ದಿಕ್ಕಿನ ಬದಿಗೆ ಸಂಚಾರ ನಡೆಸುವುದನ್ನು ನಿಲ್ಲಿಸಬೇಕು.

### ಹಸಿರು ಬಾಣದ ಲೈಟ್

300505



ಹಸಿರು ಬಾಣದ ಲೈಟ್ ಬಂದರೆ, ಹಸಿರು ಬಾಣವು ತೋರಿಸುವ ದಿಕ್ಕಿನ ಬಗಿದೆ ಸಂಚಾರ ನಡೆಸಲು ಅನುಮತಿ ಇದೆ.

# ಸಂಚಾರ ನಿಯಂತ್ರಣ ವಿಧಾನಗಳು

## ಬಂದುಬಿಟ್ಟು ಆಗುತ್ತಿರುವ ಕೆಂಪು ಲೈಟ್

ಮಿನುಗುತ್ತಿರುವ ಕೆಂಪು ಲೈಟ್, ವಾಹನವನ್ನು ನಿಧಾನಗೊಳಿಸಲು ನೀಡುವ ಎಚ್ಚರಿಕೆಯಾಗಿದೆ. ಇವನ್ನು ಸಾಮಾನ್ಯವಾಗಿ ಮುಂದೆ ಮುಖ್ಯ ರಸ್ತೆ, ವಾಚ್‌ಮನ್ ಇಲ್ಲದ ರೈಲ್ವೇ ಮಾರ್ಗ, ಹೈವೇ ಕ್ರಾಸಿಂಗ್ ಅಥವಾ ನೀವು ದಟ್ಟವಾಗಿರುವ ರಸ್ತೆಯೊಂದನ್ನು ಸೇರುವುದಕ್ಕೆ ಅಥವಾ ದಾಟುವುದಕ್ಕೆ ಮೊದಲು ಇರಿಸಲಾಗಿರುತ್ತದೆ.




300210

ಹೀಗಿದ್ದರೆ ನೀವು ಯಾವಾಗಲೂ

- ವಾಹನ ನಿಲ್ಲಿಸಬೇಕು
- ನೋಡಬೇಕು
- ಸುರಕ್ಷಿತ ಎನಿಸಿದರೆ, ಮುಂದುವರಿಯಬೇಕು..

## ಬಂದುಬಿಟ್ಟು ಆಗುತ್ತಿರುವ ಹಳದಿ ಲೈಟ್

ಮಿನುಗುವ ಹಳದಿ ಲೈಟ್ ಎಚ್ಚರಿಕೆಯ ಸಂಕೇತವಾಗಿದೆ. ಮುಖ್ಯ ರಸ್ತೆಯನ್ನು ಸೇರುವ ಚಿಕ್ಕ ರಸ್ತೆಯೊಂದು ಎದುರಾದಾಗ, ರೋಡ್ ಡಿವೈಡರ್ ತೆರೆದುಕೊಂಡಿರುವ ಸ್ಥಳ ಅಥವಾ ಹೆಚ್ಚಿನ ಟ್ರಾಫಿಕ್ ಸೇರುವ ಸ್ಥಳದಲ್ಲಿ ಇದು ನಿಮಗೆ ಎಚ್ಚರಿಕೆಯನ್ನು ನೀಡುತ್ತದೆ.



300211

ಇಂಥದ್ದು ಎದುರಾದಾಗ ನೀವು ಯಾವಾಗಲೂ

- ವಾಹನ ನಿಧಾನ ಮಾಡಬೇಕು ಮತ್ತು
- ಸುರಕ್ಷಿತ ಎನಿಸಿದರೆ ಎಚ್ಚರಿಕೆಯಿಂದ ಮುಂದುವರಿಯಬೇಕು.

## ನಡೆದುಹೋಗುವವರಿಗೆ ಲೈಟ್ ಸಿಗ್ನಲ್‌ಗಳು

ನಡೆದುಹೋಗುವವರಿಗೆ ವಿಶೇಷ ಸಿಗ್ನಲ್‌ಗಳಿರುತ್ತವೆ. ರಸ್ತೆ ದಾಟಲು ಕಾಯುತ್ತಿರುವವರಿಗೆ ಎದುರಿನ ದಿಕ್ಕಿನಲ್ಲಿ ಮನುಷ್ಯನ ಚಿತ್ರ ಹೊಂದಿರುವ ಅಥವಾ ಇಲ್ಲದ ಲೈಟ್‌ಗಳು ಇರುತ್ತವೆ.

ನಡೆದು ಹೋಗುವವರು ಸಿಗ್ನಲ್ ಹಸಿರು ಬಣ್ಣಕ್ಕೆ ಬರುವವರೆಗೂ ಕಾಯಬೇಕು. ಮತ್ತು ರಸ್ತೆಯನ್ನು ಝೀಬ್ರಾ ಕ್ರಾಸಿಂಗ್ ಇರುವಲ್ಲಿ ಮಾತ್ರವೇ ದಾಟಬೇಕು.



300215

**ಕೆಂಪು ಲೈಟ್ ಬಂದರೆ ನಿಲ್ಲಿ ಎಂದರ್ಥ.**

300212



**ಲೈಟ್ ಮಿನುಗುತ್ತಿದ್ದರೆ ಅದು ಕೆಂಪು ಲೈಟ್ ಆಗುವ ಮೊದಲು ಎಚ್ಚರಿಕೆ ನೀಡುತ್ತಿದೆ ಎಂದರ್ಥ.**

300216



**ಹಸಿರು ಲೈಟ್ ಬಂದರೆ ದಾಟಬಹುದು ಎಂದರ್ಥ**

300214

